**OS No.37/2022**

PW-1

ದಿನಾಂಕಃ **04.07.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನಾನು ಮೊಹಮದ್ ಯಾಸೀನ್ ಇವರ ವಿರುದ್ಧ ಅಜ್ಮತುಲ್ಲಾ ಅವರ ಕಡೆಯಿಂದ ಈ ದಾವೆಯನ್ನು ಹಾಕಿದ್ದೇನೆ. ಅಜ್ಮತುಲ್ಲಾ ಇವರು ನನ್ನ ಖಾಸಾ ಅಣ್ಣನಾಗಿದ್ದು, ನನಗೆ ಜಿಪಿಎ ಬರೆದುಕೊಟ್ಟಿದ್ದಾರೆ. ಜಿಪಿಎ ಬರೆದುಕೊಟ್ಟ ದಿನಾಂಕ ಖಚಿತವಾಗಿ ಹೇಳಲು ಬರುವುದಿಲ್ಲ, ಆದರೆ 2022 ನೇ ಸಾಲಿನ ಜನವರಿ ತಿಂಗಳಿನಲ್ಲಿ ಬರೆದುಕೊಟ್ಟಿದ್ದಾರೆ. ಜಿಪಿಎ ಬರೆದುಕೊಡಬೇಕಾದರೆ ನನ್ನ ಅಣ್ಣ ನೋಟರಿಯವರ ಮುಂದೆ ಹಾಜರಿರಲಿಲ್ಲ. ನ್ಯಾಯಾಲಯಗಳ ಸಂಕೀರ್ಣದ ಮುಂದೆ ಇರುವ ಕಂಪ್ಯೂಟರ್ ಸೆಂಟರಿನಲ್ಲಿ ಇಬ್ಬರೂ ಸಹಿ ಹಾಕಿದ್ದೇವೆ. ನಾನು ಮತ್ತು ನನ್ನ ಅಣ್ಣ ಇಬ್ಬರೂ ಸೇರಿ ಸ್ಟ್ಯಾಂಪ್ ಪೇಪರ್ ತಂದಿದ್ದೇವೆ. ಜಿಪಿಎ ಬರೆಯಲು ನನ್ನ ಅಣ್ಣ ಮಾಹಿತಿ ನೀಡಿರುತ್ತಾರೆ. ಈ ದಾವೆಯನ್ನು ನಡೆಸುವ ಬಗ್ಗೆ ನನಗೆ ಅಧಿಕಾರವನ್ನು ಕೊಟ್ಟಿದ್ದಾರೆ. ನನ್ನ ಅಣ್ಣ ಜಿಪಿಎ ಬರೆದುಕೊಟ್ಟ ದಿನಾಂಕದಂದು ತರೀಕೆರೆಗೆ ಬಂದಿದ್ದರು ಎಂಬುದನ್ನು ತೋರಿಸಲು ದಾಖಲೆಗಳನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ಯಾವ ನೋಟರಿಯವರ ಮುಂದೆ ಸಹಿ ಮಾಡಿದ್ದೇವೆ ಎಂದು ಈಗ ನೆನಪಿಲ್ಲ. ನೋಟರಿಯವ ರಿಜಿಸ್ಟರ್ ಗೆ ನಾವುಗಳು ಯಾವುದೇ ಸಹಿಯನ್ನು ಮಾಡಿಲ್ಲ.

**ಮುಂದುವರಿದ ಪಾಟೀ ಸವಾಲುಃ**

ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾದಂ., ರವರ ನ್ಯಾಯಾಲಯ, ತರೀಕೆರೆ.